6

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1349

ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ಕೃಷಿಮಾರುಕಟ್ಟೆ ಸಚಿವರು

ಉತ್ತರಿಸಬೇಕಾದ ದಿನಾಂಕ : 27.02.2018

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಬ್ಬನ್ ಪಾರ್ಕ್ ಆವರಣದಲ್ಲಿರುವ ಕರಗ ಕುಂಟೆ ಪ್ರದೇಶವಾಗಿ ಇದೆಯೇ; ಇದ್ದಲ್ಲಿ, ಅದರ ವಿಸ್ತೀರ್ಣ ಹಾಗೂ ಮಾಲಿಕತ್ವ ಒಳಗೊಂಡ ದಾಖಲಾತಿಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು; | ಹೌದು.<br>ಕಬ್ಬನ್ ಪಾರ್ಕ್ ಆವರಣದಲ್ಲಿ ಕರಗ ಕುಂಟೆ ಪ್ರದೇಶವಿರುತ್ತದೆ. ಅದರ ಅಂದಾಜು ವಿಸ್ತೀರ್ಣ 1 ಎಕರೆ 20 ಗುಂಟೆ. ಅದರ ಮಾಲೀಕತ್ವವು ಕಬ್ಬನ್ ಉದ್ಯಾನವನದ ವ್ಯಾಪ್ತಿಯಲ್ಲಿದ್ದು, ತೋಟಗಾರಿಕೆ ಇಲಾಖೆಗೆ ಸೇರಿರುತ್ತದೆ. ಸಂಬಂಧಪಟ್ಟ ನಕ್ಷೆಯ ಮಾಹಿತಿಯನ್ನು ಲಗತ್ತಿಸಿದೆ. |
| ಆ) | ಈ ಕರಗದ ಕುಂಟೆಗೆ, ತಮ್ಮ ಇಲಾಖೆಯಿಂದ ನಿರ್ವಹಣೆ ಕಾರ್ಯ ನಡೆಯುತ್ತಿದೆಯೇ; ಇದ್ದಲ್ಲಿ, ವಾರ್ಷಿಕವಾಗಿ ಮಾಡುತ್ತಿರುವ ವೆಚ್ಚವೆಷ್ಟು?(ದಾಖಲಾತಿಗಳೊಂದಿಗೆ ಸಂಪೂರ್ಣ ಮಾಹಿತಿಯ ವಿವರ ನೀಡುವುದು) | ಹೌದು.<br>ಕರಗದಕುಂಟೆ ಪ್ರದೇಶವನ್ನು ತೋಟಗಾರಿಕೆ ಇಲಾಖೆ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. ಈ ಉದ್ದೇಶಕ್ಕಾಗಿ ಕರಗದ ಕುಂಟೆಯ ನೀರಿನ ಮತ್ತು ಸುತ್ತಮುತ್ತಲಿನ ಶುಚಿತ್ವ ಕಾರ್ಯವನ್ನು ತೋಟಗಾರಿಕೆ ಇಲಾಖೆಯು ನಿರ್ವಹಿಸುತ್ತಿದ್ದು, ಸದರಿ ನಿರ್ವಹಣೆಯ ವೆಚ್ಚವನ್ನು ಕಬ್ಬನ್ ಉದ್ಯಾನವನದ ಒಟ್ಟಾರೆ ವೆಚ್ಚದ ಅನುದಾನದಲ್ಲಿ ಭರಿಸಲಾಗುತ್ತಿದೆ. |

ಸಂಖ್ಯೆ:ತೋಇ 121 ತೋಇವಿ 2018

(ಎಸ್.ಎಸ್.ಮಲ್ಲಿಕಾರ್ಜುನ್)

ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು